ಕುಂದಾಪುರದಲ್ಲಿ ನೂತನವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವ ಕುರಿತು

564 - ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ನೂತನವಾಗಿ ರಚಿಸುವ ಯೋಜನೆ ಸರಕಾರದ ಮುಂದಿದೆಯೇ?*

ಆ) *ಇದ್ದಲ್ಲಿ, ಬಸ್ ನಿಲ್ದಾಣದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಹಾಗೂ ನಕ್ಷೆಯ ತಯಾರಿಕೆ ಮಾಡಲಾಗಿದೆಯೇ?*

ಇ) *ಮಾಡಿದ್ದಲ್ಲಿ ಮೇಲಿನ ಕಾರ್ಯವನ್ನು ಎಂದಿನಿಂದ ಕೈಗೊಳ್ಳಲಾಗುವುದು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಹೌದು

ಆ) ಭೂಸ್ವಾಧೀನತೆಯ ಕಾರ್ಯವು ಇನ್ನೂ ಪ್ರಗತಿಯಲ್ಲಿರುತ್ತದೆ. ನಿವೇಶನವು ಸ್ವಾಧೀನಕ್ಕೊಳಪಟ್ಟ ಮೇಲೆ ನಕ್ಷೆ ಮತ್ತು ವೆಚ್ಚದ ವಿವರಗಳನ್ನು ತಯಾರು ಮಾಡಲಾಗುವುದು.

ಇ) ಉದ್ಭವಿಸುವುದಿಲ್ಲ.

ವೇತನ ವಿವಿಧ ಬಡ್ತಿಗೆ ಖರ್ಚಾಗುವ ಹಣ ಹಾಗೂ ನೌಕರರ ಸಂಖ್ಯೆ

60-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾಗಿರುವ ವಿವಿಧ ಶ್ರೇಣಿಯ ನೌಕರರ ಸಂಖ್ಯೆ ಎಷ್ಟು? ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ ಎಷ್ಟು?*

ಆ) *1992-93, 1993-94 ರಲ್ಲಿ ಎಲ್ಲಾ ವರ್ಗದಸರ್ಕಾರಿ ಅಧಿಕಾರಿ ಹಾಗೂ ನೌಕರರಿಗೆ ಕೊಟ್ಟ ವೇತನ ಭತ್ಯೆ, ಇವರ ಬಡ್ತಿಯ ಮೊತ್ತವೆಷ್ಟು ಹಾಗೂ ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ ಭತ್ಯೆ ಎಷ್ಟು*

ಇ) *1994-95ರಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ವೇತನ ಹಾಗೂ ವಿವಿಧ ಭತ್ಯೆ ಎಷ್ಟು?*

ಈ) *4ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತಂದಿದೆಯೇ? ತಂದಿದ್ದಲ್ಲಿ ಇದರಿಂದಾಗುವ ಹಣಕಾಸು ಭಾರವೆಷ್ಟು? ಜಾರಿಯಲ್ಲಿ ತರದಿದ್ದ ಪಕ್ಷದಲ್ಲಿ ಇನ್ನೂ ಏಕೆ ತಂದಿಲ್ಲ ಹಾಗೂ ಎಂದು ಜಾರಿಗೆ ತರಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ (ಜಿಲ್ಲಾ ಪಂಚಾಯತ್‌ಗಳು ಸೇರಿದಂತೆ) ಮಂಜೂರಾದ ವಿವಿಧ ಶ್ರೇಣಿಯ ಹುದ್ದೆಗಳ ಸಂಖ್ಯೆ 612638ಹಾಗೂ 31-3-1994ರಂದು ಖಾಲಿಯಿದ್ದ ಹುದ್ದೆಗಳ ಸಂಖ್ಯೆ 84022.

ಆ) ಎಲ್ಲಾ ವರ್ಗದ ಸರ್ಕಾರಿ ಅಧಿಕಾರಿ: ನೌಕರರಿಗೆ ಕೊಟ್ಟ ವೇತನ ಭತ್ಯೆಯ ಮೊತ್ತ.

1992-93	170765.25 ಲಕ್ಷ ರೂ.ಗಳು
1993-94	202261.63 ಲಕ್ಷ ರೂ.ಗಳು

ನಿವೃತ್ತರಿಗೆ ಕೊಟ್ಟ ನಿವೃತ್ತಿವೇತನ, ಭತ್ಯೆ